**ಕರ್ನಾಟಕ ವಿಧಾನಸಭೆ**

**ಹದಿನೈದನೇ ವಿಧಾನಸಭೆ**

**ಹದಿಮೂರನೇ ಅಧಿವೇಶನ**

# ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ವಿಧೇಯಕ, 2022

**(2022ರ ವಿಧಾನಸಭೆಯ ವಿಧೇಯಕ ಸಂಖ್ಯೆ–28)**

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2020 ಅನ್ನು ಮತ್ತಷ್ಟು ತಿದ್ದುಪಡಿ ಮಾಡುವ ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ 04) ಅನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಮೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 2022 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೆ ಜಾರಿಗೆ ಬರತಕ್ಕದ್ದು.

**2. ಪ್ರಕರಣ 2ರ ತಿದ್ದುಪಡಿ.-** ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ 04)ರ (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ,-

(1) (ಡಿ) ಖಂಡದ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಡಿ) "ಕನಿಷ್ಠ ಸೇವಾವಧಿ" ಎಂದರೆ ಪ್ರಕರಣ 2ರ (ಎಫ್) ಖಂಡದ ಹಾಗೂ ಪ್ರಕರಣ 4ರ ಉಪಬಂಧಗಳಿಗನುಸಾರವಾಗಿ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಶಿಕ್ಷಕರನ್ನು ಅಥವಾ ಉಪನ್ಯಾಸಕರನ್ನು ಮರು ನಿಯೋಜನೆ ಮಾಡಲಾಗಿದ್ದಲ್ಲಿ ಅಲ್ಲಿಂದ ಶಾಲೆಯ ಅಥವಾ ಪದವಿ ಪೂರ್ವ ಕಾಲೇಜಿನಲ್ಲಿ ಸಲ್ಲಿಸಿದ ಸೇವೆಯನ್ನು ಒಳಗೊಂಡಂತೆ ಶಾಲೆ ಅಥವಾ ಪದವಿ ಪೂರ್ವ ಕಾಲೇಜುಗಳಲ್ಲಿ ಸಲ್ಲಿಸಿದ ನಿರಂತರ ಮೂರು ವರ್ಷಗಳ ಸೇವೆ".

(2) (ಇ) ಖಂಡದ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಇ) "ಆದ್ಯತಾ ಕ್ರಮ" ಎಂದರೆ ಕೌನ್ಸಿಲಿಂಗ್ ಉದ್ದೇಶಕ್ಕಾಗಿ ನಿಯಮಿಸಬಹುದಾದ ಮಾನದಂಡದ ಅನುಸಾರವಾಗಿ ಶಿಕ್ಷಕನು ಪಡೆದ ಕೃಪಾಂಕವನ್ನು ಆಧರಿಸಿ ಸಿದ್ಧಪಡಿಸಿದ ಶಿಕ್ಷಕರ ಆದ್ಯತಾ ಪಟ್ಟಿ:

ಪರಂತು, ನಿರ್ದಿಷ್ಟ ಹುದ್ದೆಯ ಸಂಬಂಧದಲ್ಲಿ ಆದ್ಯತಾ ಕ್ರಮ ಎಂದರೆ, ಅಂತಹ ಹುದ್ದೆಗಳಿಗಾಗಿ ನಿರ್ದಿಷ್ಟಪಡಿಸಿದ ಪರೀಕ್ಷೆಯಲ್ಲಿ ಪಡೆದ ಅಂಕಗಳಿಗನುಸಾರವಾಗಿ ಸಿದ್ಧಪಡಿಸಿದ ಮೆರಿಟ್ ಪಟ್ಟಿ;"

**3. ಪ್ರಕರಣ 7ರ ತಿದ್ದುಪಡಿ.-** ಮೂಲ ಅಧಿನಿಯಮದ ಪ್ರಕರಣ 7ರಲ್ಲಿ,-

(i) ಉಪ ಪ್ರಕರಣ (1)ರಲ್ಲಿ ಐದು ಮತ್ತು ಆರನೇ ಪರಂತುಕಗಳ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ:-

"ಅಲ್ಲದೆ ಪರಂತು, 10ನೇ ಪ್ರಕರಣದ ಉಪಪ್ರಕರಣ (1)ರ (i) ರಿಂದ (iv)ರ ವರೆಗಿನ ಖಂಡಗಳಲ್ಲಿ ಪರಿಭಾಷಿಸಲಾದಂತೆ ವಿಶೇಷ ಪ್ರವರ್ಗಗಳಡಿಯಲ್ಲಿ ಮಾಡಲಾದ ಪರಸ್ಪರ ವರ್ಗಾವಣೆಗಳಿಗೆ ಹಾಗೂ ವರ್ಗಾವಣೆಗಳಿಗೆ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ (ಎಂದರೆ, 371 (ಜೆ) ಅಡಿಯಲ್ಲಿ ಅಧಿಸೂಚಿಸಲಾದಂತೆ 6 ಜಿಲ್ಲೆಗಳು) ಮಾಡಲಾದ ವರ್ಗಾವಣೆಗಳಿಗೆ, ಮಲೆನಾಡು ಪ್ರದೇಶಕ್ಕೆ (ಮಲೆನಾಡು ಪ್ರದೇಶ ಎಂದರೆ, ಸಂಬಂಧಪಟ್ಟ ಸರ್ಕಾರಿ ಆದೇಶದಲ್ಲಿ ಅಧಿಸೂಚಿಸಲಾದ ಕ್ಷೇತ್ರಗಳಿಗೆ), ಶೈಕ್ಷಣಿಕವಾಗಿ ಹಿಂದುಳಿದ ಕ್ಷೇತ್ರಗಳಿಗೆ (ಇಬಿಬಿಎಸ್) (ಡಾ|| ನಂಜುಡಪ್ಪ ವರದಿ ಅನುಸಾರ ಅಥವಾ ಚಾಲ್ತಿಯಲ್ಲಿರುವ ಸರ್ಕಾರಿ ಅಧಿಸೂಚನೆ ಅನುಸಾರ) ಮಾಡಲಾದ ವರ್ಗಾವಣೆಗಳಿಗೆ ಮೇಲೆ ನಿಯಮಿಸಿದ ಮಿತಿಯು ಅನ್ವಯವಾಗತಕ್ಕದ್ದಲ್ಲ".

(ii) ಉಪಪ್ರಕರಣ (2)ರ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ:-

"(2) ಜೇಷ್ಠತಾ ಘಟಕದ ಒಳಗಿನ ಅಥವಾ ಹೊರಗಿನ ಸ್ಥಳಕ್ಕೆ ಮಾಡಲಾಗುವ ಪರಸ್ಪರ ವರ್ಗಾವಣೆಯು ಇಬ್ಬರು ಶಿಕ್ಷಕರು ಆ ವೃಂದದಲ್ಲಿ ಕನಿಷ್ಠ ಐದು ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿರಬೇಕೆಂಬ, ಆ ವಲಯದ ವರ್ಗಾವಣೆಗೆ ಅನ್ಯಥಾ ಅರ್ಹರಾಗಿರಬೇಕೆಂಬ ಮತ್ತು ಕನಿಷ್ಟ ಐದು ವರ್ಷಗಳ ಸೇವೆ ಉಳಿದಿರಬೇಕೆಂಬ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು:

ಪರಂತು, ಇಬ್ಬರು ಶಿಕ್ಷಕರು ಪ್ರಕರಣ 2 (ಡಿ) ನಲ್ಲಿನ ಪರಿಭಾಷೆಗನುಸಾರವಾಗಿ ಪ್ರಸಕ್ತ ಸ್ಥಳದಲ್ಲಿ ಕನಿಷ್ಠ ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿರಬೇಕು:

ಮತ್ತು ಪರಂತು, ಆತನು ನಿಯಮಿಸಬಹುದಾದಂತೆ, ಒಂದು ಜೇಷ್ಠತಾ ಘಟಕದಿಂದ ಇನ್ನೊಂದು ಜೇಷ್ಠತಾ ಘಟಕಕ್ಕೆ ಸ್ವಇಚ್ಛೆಯಿಂದ ವರ್ಗಾವಣೆಗೊಂಡರೆ ಜೇಷ್ಠತೆಯ ಸಂರಕ್ಷಣೆಗಾಗಿ ಹಾಗೂ 7ನೇ ಪ್ರಕರಣದಲ್ಲಿ ನಮೂದಿಸಲಾದಂಥ ಇತರೆ ಷರತ್ತಿಗೆ ಅರ್ಹರಾಗತಕ್ಕದ್ದಲ್ಲ:

ಮತ್ತೂ ಪರಂತು, ಹಿಂದಿನ ವರ್ಷಗಳಲ್ಲಿನ ಪರಸ್ಪರ ವರ್ಗಾವಣೆ ಸಂಬಂಧದಲ್ಲಿ ಪ್ರಕರಣ 2 (ಡಿ) ಅಡಿಯಲ್ಲಿ ವಿನಾಯಿತಿಗಾಗಿ ಅರ್ಹರಾಗತಕ್ಕದ್ದಲ್ಲ:

ಅಲ್ಲದೆ ಪರಂತು, ಪದವಿ ಪೂರ್ವ ಕಾಲೇಜು ಅಥವಾ ಸಂಯುಕ್ತ ಜೂನಿಯರ್ ಕಾಲೇಜಿನ ಉಪನ್ಯಾಸಕರ ಸಂದರ್ಭದಲ್ಲಿ, ಪದವಿ ಪೂರ್ವ ಕಾಲೇಜು ಅಥವಾ ಸಂಯುಕ್ ತ ಜೂನಿಯರ್ ಕಾಲೇಜಿನ ಉಪನ್ಯಾಸಕನು ಕನಿಷ್ಠ ಏಳು ವರ್ಷಗಳ ಸೇವೆಯನ್ನು ಪೂರೈಸಿರತಕ್ಕದ್ದು ಅಥವಾ ಆ ಸ್ಥಳಕ್ಕೆ ವರ್ಗಾವಣೆ ಮಾಡುವುದಕ್ಕೆ ಅನ್ಯಥಾ ಅರ್ಹರಾಗಿರತಕ್ಕದ್ದು ಮತ್ತು ಕನಿಷ್ಠ ಐದು ವರ್ಷಗಳ ಸೇವೆ ಉಳಿದಿರತಕ್ಕದ್ದೆಂಬ ಷರತ್ತಿಗೆ ಒಳಪಟ್ಟು ಸೇವಾ ಅವಧಿಯಲ್ಲಿ ಒಂದು ಬಾರಿಗಿಂತ ಹೆಚ್ಚಿನ ವರ್ಗಾವಣೆಗೆ ಅನುಮತಿಸತಕ್ಕದ್ದಲ್ಲ".

(iii) ಉಪಪ್ರಕರಣ 3ರ ತರುವಾಯ, ಈ ಮುಂದಿನ ಪರಂತುಕಗಳನ್ನು ಸೇರಿಸತಕ್ಕದ್ದು ಎಂದರೆ,-

"ಪರಂತು, ತಾಲ್ಲೂಕಿನೊಳಗಿನ ವರ್ಗಾವಣೆ ಮತ್ತು ಒಂದೇ ವೃಂದ ಹಾಗೂ ತಾಲ್ಲೂಕಿನಲ್ಲಿ 10 ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ಶಿಕ್ಷಕರಿಗೆ ಅಥವಾ ಒಂದೇ ಕ್ಷೇತ್ರದಲ್ಲಿ (ಬ್ಲಾಕ್) (ಶೇಕಡ 25ಕ್ಕಿಂತ ಹೆಚ್ಚಿಗೆ ಖಾಲಿ ಸ್ಥಾನಗಳಿರುವ) ಒಟ್ಟು 15 ವರ್ಷಗಳ ಸೇವೆಯನ್ನು (ಎಲ್ಲಾ ವೃಂದಗಳು) ಪೂರ್ಣಗೊಳಿಸಿದ ಶಿಕ್ಷಕರ ವರ್ಗಾವಣೆಯನ್ನು ಹೊರತುಪಡಿಸಿ ಶೇಕಡ 25ಕ್ಕಿಂತ ಹೆಚ್ಚಿಗೆ ಖಾಲಿ ಸ್ಥಾನಗಳಿರುವ ಕ್ಷೇತ್ರಗಳಿಂದ ವರ್ಗಾವಣೆಗೆ ಅನುಮತಿಸತಕ್ಕದ್ದಲ್ಲ:

ಮತ್ತು ಪರಂತು, ಶೇಕಡ 25ರಷ್ಟು ಖಾಲಿ ಸ್ಥಾನಗಳನ್ನು ಲೆಕ್ಕ ಹಾಕುವಾಗ, ಶಿಕ್ಷಕರ ಎಲ್ಲಾ ವೃಂದಗಳನ್ನು ಎಂದರೆ, ಪ್ರಾಥಮಿಕ ಶಿಕ್ಷಕರ ಅನುಸೂಚಿಯನುಸಾರವಾಗಿ ಎಲ್ಲಾ ಪ್ರಾಥಮಿಕ ಪ್ರವರ್ಗ ಮತ್ತು ಮಾಧ್ಯಮಿಕ ಶಿಕ್ಷಕರ ಅನುಸೂಚಿಯನುಸಾರವಾಗಿ ಎಲ್ಲಾ ಮಾಧ್ಯಮಿಕ ಪ್ರವರ್ಗಗಳನ್ನು ಒಳಗೊಳ್ಳತಕ್ಕದ್ದು.

**4. 10ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 10ನೇ ಪ್ರಕರಣದಲ್ಲಿ,-

(1) ಉಪಪ್ರಕರಣ (2)ರ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

“(2) ಉಪಪ್ರಕರಣ (1)ರ ಖಂಡ (i)ಯಿಂದ (iv)ವರೆಗಿನ ಖಂಡಗಳ ಅಡಿಯಲ್ಲಿ ಬರುವ ಪ್ರವರ್ಗಗಳು,-

(ಎ) ಸಮರ್ಪಕ ಮರು ಹಂಚಿಕೆ ಅಡಿಯಲ್ಲಿ ವಿನಾಯಿತಿ.

(ಬಿ) ವಲಯ ವರ್ಗಾವಣೆ ಅಡಿಯಲ್ಲಿ ವಿನಾಯಿತಿ.

(ಸಿ) ಕೋರಿಕೆ ವರ್ಗಾವಣೆಗಳ ಅಡಿಯಲ್ಲಿ ಆದ್ಯತೆ.

(ಶಿಕ್ಷಕನು ಸೇವಾ ಅವಧಿಯಲ್ಲಿ ಒಂದು ಬಾರಿ ಮಾತ್ರ ಆದ್ಯತೆಯನ್ನು ಕ್ಲೇಮು ಮಾಡತಕ್ಕದ್ದು).

(ಡಿ) ನಿರ್ದಿಷ್ಟ ಹುದ್ದೆಗಳಿಗಾಗಿ ನಿರ್ದಿಷ್ಟಪಡಿಸಲಾದ ಲಿಖಿತ ಪರೀಕ್ಷೆಯನ್ನು ಯಶಸ್ವಿಯಾಗಿ ಉತ್ತೀರ್ಣರಾಗುವ ಮೂಲಕ ವರ್ಗಾವಣೆ ಪಡೆದ ಅಂತಹ ನಿರ್ದಿಷ್ಟ ಹುದ್ದೆಯಿಂದ ಅವರು ಹಿಮ್ಮುಖ ವರ್ಗಾವಣೆಯನ್ನು (transferred back) ಪಡೆಯುವಾಗ ಆದ್ಯತೆ

-ಇವುಗಳಿಗಾಗಿ ಅರ್ಹವಾಗಿರುತ್ತವೆ.

(2) ಉಪ ಪ್ರಕರಣ (5)ರ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ:-

“(5) ಉಪಪ್ರಕರಣ (1)ರ ಖಂಡ (v)ರಡಿಯಲ್ಲಿ ಬರುವ ಶಿಕ್ಷಕರನ್ನು ಕೋರಿಕೆ ವರ್ಗಾವಣೆ ಅವಧಿಯಲ್ಲಿ ಆದ್ಯತೆ ನೀಡತಕ್ಕದ್ದು. ಶಿಕ್ಷಕನು ಆತನ ಪತ್ನಿ ಅಥವಾ ಆಕೆಯ ಪತಿಯು ಬೇರೆ ಬೇರೆ ತಾಲ್ಲೂಕಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದರೆ, ಆ ಜಿಲ್ಲೆಯ ಯಾವುದೇ ತಾಲ್ಲೂಕಿನಲ್ಲಿ ಲಭ್ಯವಿರುವ ಖಾಲಿ ಸ್ಥಾನಕ್ಕೆ ವರ್ಗಾವಣೆ ಕೋರಲು ಅನುಮತಿಸತಕ್ಕದ್ದು. ಇಬ್ಬರೂ ಅದೇ ತಾಲ್ಲೂಕಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದರೆ, ಆಗ ಆದ್ಯತೆಯ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಲು ಅವರು ಅರ್ಹರಾಗತಕ್ಕದ್ದಲ್ಲ”.

(3) ಉಪಪ್ರಕರಣ (6)ರ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

“(6) ಉಪ ಪ್ರಕರಣ (1)ರ ಖಂಡ (v)ರ ಅಡಿಯಲ್ಲಿ ಅರ್ಹ ಶಿಕ್ಷಕರು ಕೋರಿಕೆ ವರ್ಗಾವಣೆಗಾಗಿ ಅಥವಾ ನಿರ್ದಿಷ್ಟ ಹುದ್ದೆಗಳಿಗಾಗಿ ನಿರ್ದಿಷ್ಟಪಡಿಸಲಾದ ಲಿಖಿತ ಪರೀಕ್ಷೆಯನ್ನು ಯಶಸ್ವಿಯಾಗಿ ಉತ್ತೀರ್ಣರಾಗುವ ಮೂಲಕ ವರ್ಗಾವಣೆ ಪಡೆದ ಅಂತಹ ನಿರ್ದಿಷ್ಟ ಹುದ್ದೆಯಿಂದ ಹಿಮ್ಮುಖ ವರ್ಗಾವಣೆಯನ್ನು ಪಡೆಯುವಾಗ ಆದ್ಯತಾ ಕ್ರಮಕ್ಕನುಸಾರವಾಗಿ ಆದ್ಯತೆಯನ್ನು ನೀಡಲಾಗುವುದು.”

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2020 (2020ರ ಕರ್ನಾಟಕ ಅಧಿನಿಯಮ 04)ನ್ನು,-

(1) ಕನಿಷ್ಠ ಸೇವಾವಧಿ ಮತ್ತು ಆದ್ಯತಾ ಕ್ರಮ-ಪದಗಳನ್ನು ಮರುಪರಿಭಾಷಿಸಲು;

(2) ಪರಸ್ಪರ ವರ್ಗಾವಣೆ ಮತ್ತು ವಿಶೇಷ ಪ್ರವರ್ಗಗಳ ಅಡಿಯಲ್ಲಿ ಮಾಡಲಾದ ವರ್ಗಾವಣೆಗಳ ಸಂದರ್ಭದಲ್ಲಿ 7ನೇ ಪ್ರಕರಣದ ಉಪ ಪ್ರಕರಣ (1)ರಡಿ ನಿಯಮಿಸಲಾದ ಮಿತಿಯನ್ನು ವಿನಾಯಿತಿಸಲು ;

(3) ಇಬ್ಬರೂ ಶಿಕ್ಷಕರು ಐದು ವರ್ಷಗಳ ಸೇವೆಯನ್ನು ಕಡ್ಡಾಯವಾಗಿ ಪೂರ್ಣಗೊಳಿಸಿದ ಷರತ್ತಿಗೊಳಪಟ್ಟು, ಸೇವೆಯಲ್ಲಿ ಒಂದಕ್ಕಿಂತ ಹೆಚ್ಚುಬಾರಿ ಜೇಷ್ಠತಾ ಘಟಕದಿಂದ ಹೊರಗೆ ಪರಸ್ಪರ ವರ್ಗಾವಣೆಗೆ ಅನುಮತಿಸಲು ;

(4) ಸಮರ್ಪಕ ಮುರುಹಂಚಿಕೆಯ ಅಡಿಯಲ್ಲಿನ ವಿನಾಯಿತಿ, ವಲಯವಾರು ವರ್ಗಾವಣೆಯ ಅಡಿಯಲ್ಲಿ ವಿನಾಯಿತಿ, ಕೋರಿಕೆ ವರ್ಗಾವಣೆಗಳ ಅಡಿಯಲ್ಲಿನ ಆದ್ಯತೆ ಮತ್ತು ನಿರ್ದಿಷ್ಟಪಡಿಸಲಾದ ಹುದ್ದೆಯಿಂದ ಹಿಮ್ಮುಖ ವರ್ಗಾವಣೆ ಪಡೆಯುವಾಗಿನ ಆದ್ಯತೆಗಾಗಿ 10ನೇ ಪ್ರಕರಣದ (1)ನೇ ಉಪಪ್ರಕರಣದ (i) ರಿಂದ (iv) ಖಂಡಗಳಡಿ ಬರುವ ಪ್ರವರ್ಗಗಳಿಗೆ ಉಪಬಂಧ ಕಲ್ಪಿಸಲು ;

(5) ಪತಿ ಅಥವಾ ಪತ್ನಿಯು ರಾಜ್ಯ ಅಥವಾ ಕೇಂದ್ರ ಸರ್ಕಾರ ಅಥವಾ ಅನುದಾನಿತ ಶಿಕ್ಷಣ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರಿಗಾಗಿ ಕೋರಿಕೆ ವರ್ಗಾವಣೆ ಸಮಯದಲ್ಲಿ ಆದ್ಯತೆಯನ್ನು ನೀಡಲು,

ಇತರೆ ಕೆಲವು ಪ್ರಾಸಂಗಿಕ ಮತ್ತು ಅನುಷಂಗಿಕ ತಿದ್ದುಪಡಿಗಳನ್ನು ಮಾಡುವುದು ಸಹ ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ, ಈ ವಿಧೇಯಕ.

# ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

## ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತು ಜ್ಞಾಪನ ಪತ್ರ

| | |
|---|---|
| **ಖಂಡ 2** | ಪ್ರತಿಯೋಜಿಸಲು ಉದ್ದೇಶಿಸಿರುವ 2ನೇ ಪ್ರಕರಣದ (ಇ) ಖಂಡವು, ಕೌನ್ಸಿಲಿಂಗ್ ಉದ್ದೇಶಕ್ಕಾಗಿ ಶಿಕ್ಷಕರ ಪಟ್ಟಿಯನ್ನು ಸಿದ್ಧಪಡಿಸುವುದಕ್ಕೆ ಮಾನದಂಡಗಳನ್ನು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ. |
| **ಖಂಡ 3** | ಪ್ರತಿಯೋಜಿಸಲು ಉದ್ದೇಶಿಸಿರುವ 7ನೇ ಪ್ರಕರಣದ (2)ನೇ ಉಪಪ್ರಕರಣದ ಎರಡನೇ ಪರಂತುಕವು, ಒಂದು ಜೇಷ್ಠತಾ ಘಟಕದಿಂದ ಮತ್ತೊಂದು ಘಟಕಕ್ಕೆ ಸ್ವಇಚ್ಛೆ ವರ್ಗಾವಣೆಗಾಗಿ ಇತರೆ ಷರತ್ತುಗಳನ್ನು ನಿಯಮಗಳ ಮೂಲಕ ನಿಯಮಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ. |

ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿದೆ.

**ಬಿ.ಸಿ. ನಾಗೇಶ್**
ಪ್ರಾಥಮಿಕ, ಪ್ರೌಢ ಶಿಕ್ಷಣ ಮತ್ತು
ಸಕಾಲ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

**ಅನುಬಂಧ**

**ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ, 2020ರ (2020ರ ಕರ್ನಾಟಕ ಅಧಿನಿಯಮ-17) ಉದ್ಧೃತ ಭಾಗ**

**XX XX XX**

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು.-

**XX XX XX**

(ಡಿ) "ಕನಿಷ್ಠ ಸೇವಾವಧಿ"ಎಂದರೆ, ಆತನು ಮರು-ನಿಯೋಜನೆ ಹೊಂದಿರುವ ಶಾಲೆಯಲ್ಲಿ ಸಲ್ಲಿಸಿದ ಸೇವೆಯೂ ಒಳಗೊಂಡಂತೆ ಮೂರು ವರ್ಷಗಳ ನಿರಂತರ ಸೇವೆ;

(ಇ) "ಆದ್ಯತೆಯ ಕ್ರಮ" ಎಂದರೆ, ಕೌನ್ಸಿಲಿಂಗ್ ಉದ್ದೇಶಕ್ಕಾಗಿ, ನಿಯಮಿಸಬಹುದಾದ ಮಾನದಂಡದ ಅನುಸಾರವಾಗಿ ಶಿಕ್ಷಕನು ಗಳಿಸಿದ ಕೃಪಾಂಕದ (weighted score) ಆಧಾರದ ಮೇಲೆ ಸಿದ್ಧಪಡಿಸಿದ ಶಿಕ್ಷಕರ ಆದ್ಯತಾ ಪಟ್ಟಿ;

**XX XX XX**

**7. ಕೌನ್ಸೆಲಿಂಗ್ ಮೂಲಕ ವರ್ಗಾವಣೆ.-** (1) 4, 5 ಮತ್ತು 6ನೇ ಪ್ರಕರಣಗಳ ಅಡಿಯಲ್ಲಿ ಶಿಕ್ಷಕರ ವರ್ಗಾವಣೆಯನ್ನು ವರ್ಷದಲ್ಲಿ ಏಪ್ರಿಲ್ ಮತ್ತು ಮೇ ತಿಂಗಳ ಸಾರ್ವತ್ರಿಕ ವರ್ಗಾವಣೆಯ ವೇಳೆಯು ಸಾಮಾನ್ಯವಾಗಿ ಗಣಕೀಕೃತ ಕೌನ್ಸೆಲಿಂಗ್ ಪ್ರಕ್ರಿಯೆಯ ಮೂಲಕ ನಿಯಮಿಸಬಹುದಾದ ಅಂಥ ವಿಧಾನದಲ್ಲಿ ನಡೆಸತಕ್ಕದ್ದು:

ಪರಂತು ಏಪ್ರಿಲ್ ಮತ್ತು ಮೇ ತಿಂಗಳಿನ ತರುವಾಯವೂ ವಿಶೇಷ ಸನ್ನಿವೇಶಗಳಲ್ಲಿ ಲಿಖಿತದಲ್ಲಿ ದಾಖಲಿಸಬೇಕಾದ ಕಾರಣಗಳಿಗಾಗಿ ರಾಜ್ಯ ಸರ್ಕಾರದ ನಿರ್ದೇಶನದ ಮೇಲೆ ವರ್ಗಾವಣೆಯನ್ನು ಮಾಡಬಹುದು:

ಮತ್ತು ಪರಂತು ಯಾವೊಬ್ಬ ಶಿಕ್ಷಕನು ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿ ಒಂದು ಸ್ಥಳವನ್ನು ಆಯ್ಕೆ ಮಾಡದಿದ್ದರೆ ಮತ್ತು ಅದನ್ನು ಶಿಷ್ಯ-ಶಿಕ್ಷಕ ಅನುಪಾತದ ಆಧಾರದ ಮೇಲೆ ಸಾರ್ವಜನಿಕ ಹಿತಾಸಕ್ತಿಯಲ್ಲಿ ಭರ್ತಿ ಮಾಡುವುದು ಅಗತ್ಯವಾಗಿದ್ದರೆ, ರಾಜ್ಯ ಸರ್ಕಾರವು ನಿಯಮಿಸಬಹುದಾದ ಅಂಥ ಇತರ ಷರತ್ತುಗಳಿಗೆ ಒಳಪಟ್ಟು ಕನಿಷ್ಠ ಸೇವಾವಧಿಯನ್ನು ಪೂರೈಸಿದ ಯಾವೊಬ್ಬ ಶಿಕ್ಷಕನನ್ನು ಅಂಥ ಸ್ಥಳಕ್ಕೆ ವರ್ಗಾವಣೆ ಮಾಡಬಹುದು.

ಮತ್ತು ಪರಂತು ಕರ್ನಾಟಕ ಸಿವಿಲ್ ಸೇವೆಗಳ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ಅಡಿಯಲ್ಲಿ ಗಂಭೀರವಾದ ದಂಡನೆಗೆ ಒಳಗಾಗಿರುವ ಅಥವಾ ಕಾನೂನಿನ ನ್ಯಾಯಾಲಯದಲ್ಲಿ ಕ್ರಿಮಿನಲ್ ಚಾರ್ಜುಗಳನ್ನು ಎದುರಿಸುತ್ತಿರುವ ಶಿಕ್ಷಕನನ್ನು, ಆತನು ಕನಿಷ್ಠ ಸೇವಾವಧಿಯನ್ನು ಪೂರೈಸಿರದಿದ್ದರೂ ಸಹ ಸಿ-ವಲಯದಲ್ಲಿನ ಯಾವುದೇ ಖಾಲಿಜಾಗಕ್ಕೆ ವರ್ಗಾವಣೆ ಮಾಡತಕ್ಕದ್ದು:

ಅಲ್ಲದೆ ಪರಂತು ಈ ಅಧಿನಿಯಮದ 5 ಮತ್ತು 6ನೇ ಪ್ರಕರಣಗಳ ಅಡಿಯಲ್ಲಿ, ಒಂದು ವರ್ಷದಲ್ಲಿ ಯಾವುದೇ ವೃಂದಕ್ಕೆ ಮತ್ತು ಯಾವುದೇ ಜೇಷ್ಠತಾ ಘಟಕದಲ್ಲಿ ಮಾಡಲಾದ ವರ್ಗಾವಣೆಗಳ ಒಟ್ಟು ಸಂಖ್ಯೆಯು ಶೇಕಡಾ ಹದಿನೈದರಷ್ಟನ್ನು ಅಥವಾ ರಾಜ್ಯ ಸರ್ಕಾರವು ಅಧಿಸೂಚಿಸಿದ ಅಂಥ ಕೆಳಮಿತಿಯನ್ನು ಮೀರತಕ್ಕದ್ದಲ್ಲ:

ಅಲ್ಲದೆ ಪರಂತು, ನಾಲ್ಕನೇ ಪರಂತುಕದಲ್ಲಿ ನಿಯಮಿಸಲಾದ ಮಿತಿಯು ಪರಸ್ಪರ ವರ್ಗಾವಣೆಗಳಿಗೆ ಮತ್ತು 10ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿನ (i) ರಿಂದ (iv)ನೇ ಖಂಡಗಳಲ್ಲಿ ಪರಿಭಾಷಿಸಿದ ವಿಶೇಷ ಪ್ರವರ್ಗಗಳ ಅಡಿಯಲ್ಲಿ ಮಾಡಿದ ವರ್ಗಾವಣೆಗಳಿಗೆ ಅನ್ವಯಿಸತಕ್ಕದ್ದಲ್ಲ.

(2) ಜ್ಯೇಷ್ಠತಾ ಘಟಕದ ಹೊರಗಿನ ಸ್ಥಳಕ್ಕೆ ಪರಸ್ಪರ ವರ್ಗಾವಣೆಯನ್ನು ಆ ವಲಯಕ್ಕೆ ವರ್ಗಾಯಿಸಬೇಕಾದ ಅರ್ಹವಾಗಿರುವ ಮತ್ತು ಐದು ವರ್ಷಗಳ ಬಾಕಿ ಉಳಿದ ಸೇವೆಯನ್ನು ಹೊಂದಿರುವ ಅನ್ಯಥಾ, ಇಬ್ಬರೂ ಶಿಕ್ಷಕರು ಏಳು ವರ್ಷಗಳ ಕನಿಷ್ಠ ಸೇವೆಯನ್ನು ಪೂರೈಸಿರುವ ಷರತ್ತಿಗೆ ಒಳಪಟ್ಟು ಸೇವೆಯಲ್ಲಿ ಒಂದು ಸಲಕ್ಕಿಂತ ಹೆಚ್ಚಲ್ಲದಂತೆ ಅನುಮತಿಸತಕ್ಕದ್ದು. ಆತನು ಜ್ಯೇಷ್ಠತೆಯನ್ನು ರಕ್ಷಿಸಿಕೊಳ್ಳಲು ಅರ್ಹನಾಗಿರತಕ್ಕದ್ದಲ್ಲ ಮತ್ತು ನಿಯಮಿಸಬಹುದಾದ ಅಂಥ ಇತರ ಷರತ್ತುಗಳಿಗೆ ಒಳಪಟ್ಟಿರತಕ್ಕದ್ದು:

ಪರಂತು, ಜೇಷ್ಠತಾ ಘಟಕದ ಒಳಗೆ ಶಿಕ್ಷಕನ ಪರಸ್ಪರ ವರ್ಗಾವಣೆಯ ಸಂದರ್ಭದಲ್ಲಿ ಆ ಹುದ್ದೆಗೆ ವರ್ಗಾವಣೆ ಮಾಡಲು ಆತನು ಅನ್ಯಥಾ ಅರ್ಹನಾಗಿರತಕ್ಕದ್ದು.

**XX XX XX**

**10. ಸಮರ್ಪಕ ಮರುಹಂಚಿಕೆ; ವಲಯವಾರು ವರ್ಗಾವಣೆಗಳಿಂದ ವಿನಾಯಿತಿಗಳು ಮತ್ತು ಕೋರಿಕೆ ವರ್ಗಾವಣೆಗಳಿಗೆ ಆದ್ಯತೆ.-**

**XX XX XX**

(2) (i) ರಿಂದ (iv)ನೇ ಖಂಡಗಳ ಅಡಿಯಲ್ಲಿ ಬರುವ ಪ್ರವರ್ಗಗಳು ಸಮರ್ಪಕ ಮರುಹಂಚಿಕೆ ಮತ್ತು ವಲಯವಾರು ವರ್ಗಾವಣೆ ಎರಡಕ್ಕೂ ಹಾಗೂ ಕೋರಿಕೆ ವರ್ಗಾವಣೆ ಅಡಿಯಲ್ಲಿ ಆದ್ಯತೆಗೆ ಕೂಡಾ ಅರ್ಹರಾಗತಕ್ಕದ್ದು. ಆದ್ಯತೆಗಳನ್ನು ಶಿಕ್ಷಕನ ಸೇವಾ ಅವಧಿಯಲ್ಲಿ ಒಂದು ಬಾರಿ ಮಾತ್ರವೇ ಕ್ಲೇಮು ಮಾಡತಕ್ಕದ್ದು.

**XX XX XX**

(5) (v)ನೇ ಪ್ರವರ್ಗದ ಅಡಿಯಲ್ಲಿ ಬರುವ ಶಿಕ್ಷಕರಿಗೆ ಕೋರಿಕೆ ವರ್ಗಾವಣೆಯ ಅವಧಿಯಲ್ಲಿ ಪ್ರಾಶಸ್ತ್ಯವನ್ನು ನೀಡತಕ್ಕದ್ದು. ಶಿಕ್ಷಕನು, ಆತನ ಪತ್ನಿ ಅಥವಾ ಆಕೆಯ ಪತಿಯು ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕಲ್ಲದೆ ಬೇರೆ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಲ್ಲಿ, ಆತನ ಪತ್ನಿ ಅಥವಾ ಆಕೆಯ ಪತಿಯು ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕಿಗೆ ಮಾತ್ರವೇ ವರ್ಗಾವಣೆಯನ್ನು ಕೋರುವುದಕ್ಕೆ ಅನುಮತಿಸಬಹುದು. ಇಬ್ಬರೂ ಅದೇ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಲ್ಲಿ ಆಗ ಆದ್ಯತೆಯ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಲು ಅವರು ಅರ್ಹರಾಗತಕ್ಕದ್ದಲ್ಲ:

ಪರಂತು, ಸಮರ್ಪಕ ಮರುಹಂಚಿಕೆ ಮತ್ತು ವಲಯವಾರು ವರ್ಗಾವಣೆಗಳ ಅವಧಿಯಲ್ಲಿ ಹೆಚ್ಚುವರಿ ಶಿಕ್ಷಕನನ್ನು ಆತನ ಪತ್ನಿ ಅಥವಾ ಆಕೆಯ ಪತಿಯು ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕಿನೊಳಗೆ ಸ್ಥಳ ನಿಯುಕ್ತಿಗೊಳಿಸತಕ್ಕದ್ದು.

(6) ಕಡ್ಡಾಯ ವರ್ಗಾವಣೆ, ವಲಯ ವರ್ಗಾವಣೆಯ ಮೇಲೆ ಅಥವಾ ಸಮರ್ಪಕ ಮರುಹಂಚಿಕೆಯ ಮೇರೆಗೆ 2019-20ನೇ ವರ್ಷದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕನ ಸಂದರ್ಭದಲ್ಲಿ ತಾಲ್ಲೂಕಿನ ಹೊರಗೆ ಅಥವಾ ಪ್ರೌಢಶಾಲಾ ಶಿಕ್ಷಕನ ಸಂದರ್ಭದಲ್ಲಿ ಜಿಲ್ಲೆಯ ಹೊರಗೆ ವರ್ಗಾವಣೆಗೊಂಡ ಶಿಕ್ಷಕನ ಸಂಬಂಧದಲ್ಲಿ, ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 2021ರ ಪ್ರಾರಂಭದ ದಿನಾಂಕದ ನಿಕಟ ತರುವಾಯ ಮಾಡಿದ ವರ್ಗಾವಣೆಯಲ್ಲಿ, 2019-2020ನೇ ಸಾಲಿನಲ್ಲಿ ವರ್ಗಾವಣೆ ಪೂರ್ವದಲ್ಲಿ ಎಲ್ಲಿ ಕಾರ್ಯನಿರ್ವಹಿಸುತ್ತಿದ್ದರೋ ಆ ಸಂಬಂಧಪಟ್ಟ ತಾಲ್ಲೂಕು ಅಥವಾ ಜಿಲ್ಲೆಯೊಳಗೆ ಸ್ಥಳನಿಯುಕ್ತಿಯ ಪ್ರಯೋಜನವನ್ನು ನೀಡುವುದಕ್ಕಾಗಿ, ಮುಂಬರುವ ಇತರ ರೀತಿಯ ವರ್ಗಾವಣೆಗಳಿಗೆ ಪೂರ್ವದಲ್ಲಿ ಖಾಲಿ ಹುದ್ದೆಗಳ ಲಭ್ಯತೆಗೆ ಒಳಪಟ್ಟು ಅವರು ಕಾರ್ಯನಿರ್ವಹಿಸುತ್ತಿರುವ ತಾಲ್ಲೂಕು ಅಥವಾ ಜಿಲ್ಲೆಯೊಳಗೆ ಒಂದು ಸಲದ ಕ್ರಮವಾಗಿ (one time measure) ನಿಯಮಿಸಬಹುದಾದಂತಹ ರೀತಿಯಲ್ಲಿ ವರ್ಗಾವಣೆಯ ಸ್ಥಳವನ್ನು ಆಯ್ಕೆಮಾಡಲು ಅವಕಾಶವನ್ನು ಸಹ ಒದಗಿಸತಕ್ಕದ್ದು.

**XX XX XX**

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು, ಪಿ7, ಕಾಸೂ , ಪ್ರತಿಗಳು 500, 21ನೇ ಸೆಪ್ಟೆಂಬರ್, 2022

**KARNATAKA LEGISLATIVE ASSEMBLY**
**FIFTEENTH LEGISLATIVE ASSEMBLY**
**THIRTEENTH SESSION**

# THE KARNATAKA STATE CIVIL SERVICES (REGULATION OF TRANSFER OF TEACHERS) (AMENDMENT) BILL, 2022

**(LA Bill No. 28 of 2022)**

A Bill further to amend the Karnataka State Civil Services (Regulation of Transfer of Teachers) Act, 2020.

Whereas it is expedient further to amend the Karnataka State Civil Services (Regulation of Transfer of Teachers) Act, 2020 (Karnataka Act 04 of 2020) for the purposes hereinafter appearing;

Be it enacted by the Karnataka State Legislature in the Seventy third year of the Republic of India, as follows:-

**1. Short title and commencement.-** (1) This Act may be called the Karnataka State Civil Services (Regulation of Transfer of Teachers) (Amendment) Act, 2022.

(2) It shall come into force at once.

**2. Amendment of section 2.-** In the Karnataka State Civil Services (Regulation of Transfer of Teachers) Act, 2020 (Karnataka Act 04 of 2020) (hereinafter referred to as the Principal Act), in section 2,-

(1) for clause (d), the following shall be substituted namely,-

"(d) "Minimum period of service" means a continuous service of three years in a school or pre-university college including service rendered in a school or pre-university college from where the teacher or Lecturer has been re-deputed in the current academic year as per the provisions of clause (f) of section 2 and section 4."

(2) for clause (e), the following shall be substituted namely,-

"(e) "Order of Priority" means priority list of teachers prepared based on weighted score obtained by the teacher as per the criteria as may be prescribed, for the purpose of counseling:

Provided that, for a specified post Order of Priority means the merit list prepared as per the marks obtained in the Examination specified for such posts;"

**3. Amendment of section 7.-** In section 7 of the principal Act,-

(i) in sub-section (1), for fifth and sixth provisos the following shall be substituted namely,-

"Provided also that, the limit prescribed above shall not be applicable to the mutual transfers and transfers made under special categories as defined in clause (i) to (iv) of sub-section (1) of section 10 and transfers made to Kalyana Karnataka Region (means the 06 districts as notified under 371J), Malenadu Region (Malnadu region means to the blocks as notified in the relevant GO), Educationally Backward Blocks (EBBs) (as per Dr. Nanjundappa report or as per the prevailed Government Notification)."

(ii) for sub-section (2), the following shall be substituted namely,-

"(2) The Mutual Transfer to a place within or outside the unit of seniority shall be subject to condition that both teachers must have completed minimum five years of service in the cadre; must be otherwise eligible to transfer to that zone and must have minimum five years of leftover service:

Provided that, both the teachers have completed minimum years of service in the present place as per the definition in section 2(d).

Provided further that, he shall not be eligible for protection of seniority and such other condition mentioned in section 7 if he voluntarily transfer from one unit to another unit of seniority as may be prescribed;

Provided also that, in respect of mutual transfer within previous years are not eligible for exemption under section 2 (d):

Provided also that, in case of Lecturer of Pre-University College or Composite Junior College the transfer shall be permitted not more than once in service, subject to condition that Lecturer of Pre-University College or Composite Junior College shall have completed minimum seven years of service or must be otherwise eligible to be transferred to that place and must have minimum five years of left over service."

(iii) after sub-section (3), the following provisos shall be inserted namely,-

"Provided that, transfers from blocks with more than 25 percent of vacancies shall not be allowed except within taluk transfer and to those teachers who have completed 10 years of service in same cadre and taluk or 15 years of total (all cadres) service in the same block (having more than 25 percent of vacancies):

Provided further that, while calculating 25 percent of vacancies, it shall include all cadres of teachers viz all primary category as per schedule for primary teachers and all secondary category as per schedule for secondary teachers."

**4. Amendment of section 10.-** In section 10 of the principal Act,-

(1) For sub-section (2), the following shall be substituted namely,-

"(2) The categories falling under clauses (i) to (iv) of sub-section (1) are eligible for:

(a) Exemption under rationalization.

(b) Exemption under zonal transfer.

(c) Priority under request transfers.

(Priority shall be claimed only once during the service of a teacher.)

(d) Priority while getting transferred back from specified post, to which specified post they had been transferred by successfully clearing the written examination as specified for such posts."

(2) For sub-section (5), the following shall be substituted namely,-

"(5) The teachers falling under clause (v), of sub-section (1) shall be given priority during request transfer. If the teacher is working in a different taluk from that of the spouse he is allowed to seek transfer to the vacancy available in any of the taluk of that district. If both are working in the same taluk then they are not eligible to make application under priority."

(3) For sub-section (6), the following shall be substituted namely,-

" (6) The teachers eligible under clause (v), of sub-section (1) for request transfer or while getting transferred back from specified post to which they had been transferred by successfully clearing the written examination as specified for such posts, will be given priority as per the order of priority."

## STATEMENT OF OBJECTS AND REASONS

It is considered necessary further to amend the Karnataka State Civil Services (Regulation of Transfer of Teachers) Act, 2022 (Karnataka Act 04 of 2020) to,-

(1) re-define the words minimum period of service and order of priority.

(2) exempt the limit prescribed under sub-section (1) of section 7 in case of mutual transfer and transfers made under special categories.

(3) permit mutual transfer to a place outside the unit of seniority more than once in a service, subject to condition that both the teachers must have completed minimum five years of service.

(4) make provision for the categories falling under clauses (i) to (iv) of sub-section (1) of section 10 for exemption under rationalization, exemption under zonal transfer, priority under request transfers and priority while getting transferred back from specified post.

(5) give priority during request transfer for the teacher with spouse working with the State or Central Government or Aided Education Institution.

Certain other amendments incidentals or consequential are also made.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**MEMORANDUM REGARDING DELEGATED LEGISLATION**

| | |
|---|---|
| **Clause 2:** | Clause (e) of section 2 proposed to be substituted empowers the State Government to prescribe by rules the criteria for preparation of list of teachers for the purpose of counseling. |
| **Clause 3:** | Second proviso to sub-section (2) of section 7 proposed to be substituted empowers the State Government to prescribe by rules the other conditions for voluntary transfer from one unit to another unit of seniority. |

The proposed delegation of Legislative power is normal in character.

**B.C NAGESH**
Minister for School Education and
Literacy and Sakala

**M.K. VISHALAKSHI**
Secretary
Karnataka Legislative Assembly

## ANNEXURE

## EXTRACT FROM THE KARNATAKA SECONDARY EDUCATION EXAMINATION BOARD ACT, 1966 (KARNATAKA ACT 16 OF 1966)

**xxx xxx xxx**

**2. Definitions.-**In this Act, unless the context otherwise requires,-

**xxx xxx xxx**

(d) "**Minimum period of service**" means a continuous service of three years in a school including service rendered in a school from where he has been re-deployed.

(e)"**Order of priority**" means priority list of teachers prepared based on weighted score obtained by the teacher as per the criteria as may be prescribed, for the purpose of counselling;

**xxx xxx xxx**

**7. Transfer by counselling.-**(1)The transfer of teachers under sections 4, 5 and 6 shall ordinarily be done during the General transfer in the month of April and May, in a year through a process of computerized counselling conducted in such manner as may be prescribed:

Provided that, the transfer may be made even after the month of April and May in special circumstances for the reasons to be recorded in writing on direction of the State Government:

Provided further that, where no teacher has opted for a place in the process of counselling and it is required to be filled in the public interest based on the pupil-teacher ratio, the State Government may transfer any teacher to such place who has completed minimum period of service, subject to such other conditions as may be prescribed:

Provided also that, a teacher undergoing a major penalty under the Karnataka Civil Service (Classification, Control and Appeal) Rules, 1957 or facing criminal charges in Court of Law shall be transferred to any vacancy in 'Zone-C' even if he has not completed minimum period of service:

Provided also that, the total number of transfers made under sections 5 and 6 under this Act in a year, for any cadre and in any unit of seniority shall not exceed fifteen percent or such lower limit as notified by the State Government:

Provided also that, the limit prescribed in the fourth proviso, shall not be applicable to mutual transfers and transfers made under special categories as defined in clause (i) to (iv) of sub-section (1) of section 10.

(2) The mutual transfer to a place outside the unit of seniority shall be permitted not more than once in-service subject to condition that both teachers must have completed minimum seven years of service; must be otherwise eligible to be transferred to that zone

and must have minimum five years of leftover service. He shall not be eligible for protection of seniority and be subject to such other conditions as may be prescribed.

Provided that, in respect of mutual transfer of a teacher within the unit of seniority he shall be otherwise eligible for transfer to that post.

**xxx xxx xxx**

**10. Exemptions from rationalization, zonal transfers and priority for request transfers.-**

**xxx xxx xxx**

(2) The categories falling under clauses (i) to (iv) are eligible for both exemptions under rationalization and zonal transfers and also priority under request transfers. The priorities shall be claimed only once during the service of a teacher.

**xxx xxx xxx**

(5) The teachers falling under category (v) shall be given priority during request transfer. If the teacher is working in a different taluk as that of the spouse is allowed to seek transfer to the working taluk of the spouse only. If both are working in the same taluk then they are not eligible to make application under priority:

Provided that, during rationalization and zonal transfers the excess teacher shall be posted within the working taluk of the spouse.

(6) In case of a teacher who was transferred on compulsory transfer, zonal transfer or under rationalisation outside the taluk in case of a primary school teacher or district in case of a high school teacher during the year 2019-20 shall also be provided an opportunity to opt a place of transfer within the taluk or district where they were working during the year 2019- 20 as a onetime measure ahead of other types of transfers subject to the availability of vacancies so as to give the benefit of posting within the concerned taluk or district in the transfer done immediately after the date of commencement of the Karnataka State Civil Services (Regulation of Transfer of Teachers) (Amendment) Act, 2021 in the manner as may be prescribed.

**xxx xxx xxx**

Govt. Press, Vikasa Soudha, Bengaluru, 21st Sept, 2022, P7, W.D. , Copies 500